ಇ) ರಾಜ್ಯಶಾಸ್ತ್ರ ವಿಷಯದಲ್ಲಿ ಉಪನ್ಯಾಸಕರ ಕೊರತೆ ಇದೆ.

ಬೈಂದೂರು ವಿಧಾನಸಭಾ ಕ್ಷೇತ್ರಕ್ಕೆ ಪ್ರೌಢಶಾಲೆ ಮಂಜೂರಾತಿ.

1799(1875)

ಶ್ರೀ ಗೋಪಾಲ ಪೂಜಾರಿ ಕೆ.(ಬೈಂದೂರು): ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಉಡುಪಿ ಜಿಲ್ಲೆ ಬೈಂದೂರು ವಿಧಾನ ಸಭಾ ಕ್ಷೇತ್ರಕ್ಕೆ ಕಳೆದ 5-6 ವರ್ಷಗಳಿಂದ ಪ್ರೌಢ ಶಾಲೆಗೆ ಮಂಜೂರಾತಿ ನೀಡದಿರುವ ಕಾರಣವೇನು;

2) ಬೈಂದೂರು ಕ್ಷೇತ್ರದಲ್ಲಿ ಪ್ರಾಥಮಿಕ ವಿದ್ಯಾರ್ಥಿಗಳ ಸಂಖ್ಯೆ ಅತಿ ಹೆಚ್ಚಾಗಿ 5 ಪ್ರೌಢಶಾಲೆಗಳ ಅವಶ್ಯವಿದ್ದು ಈ ಪ್ರೌಢಶಾಲೆಗಳಿಗೆ ಈ ವರ್ಷದಲ್ಲಿ ಮಂಜೂರಾತಿ ನೀಡಿ ಪ್ರಾರಂಭಿಸಲಾಗುವುದೇ;

3) ಹಾಗಿದ್ದಲ್ಲಿ ಈ ಪ್ರೌಢಶಾಲೆಗಳನ್ನು ತೆರೆಯಲು ಸರಕಾರಕ್ಕಿರುವ ತೊಂದರೆಗಳೇನು;

ಶ್ರೀ ಎಚ್.ವಿಶ್ವನಾಥ್(ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು):

1) ಪ್ರಸ್ತಾವನೆಗಳು ಬಂದಿರುವುದಿಲ್ಲ.

2) ಉದ್ಭವಿಸುವುದಿಲ್ಲ.

3) ಪ್ರಸ್ತಾವನೆಗಳು ಬಂದಲ್ಲಿ ಪರಿಶೀಲಿಸಲಾಗುವುದು.

ಮೈಸೂರು ತಾಲ್ಲೂಕಿನಲ್ಲಿರುವ ಆರೋಗ್ಯ ಸೇವಾ ಕೇಂದ್ರಗಳು.

1800(2420)

ಶ್ರೀ ಗುರುಸ್ವಾಮಿ ಎ.ಎಸ್.(ಚಾಮುಂಡೇಶ್ವರಿ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ತಾಲ್ಲೂಕಿನಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳೆಷ್ಟು; ಹಾಗೂ

ಇವುಗಳನ್ನು ಯಾವ ಆಧಾರದ ಮೇಲೆ ಮಂಜೂರು ಮಾಡಲಾಗಿದೆ;

ಆ) ಈ ಆರೋಗ್ಯ ಕೇಂದ್ರಗಳಲ್ಲಿ ರೋಗಿಗಳಿಗೆ ಸರಾಸರಿ ಹಾಜರಾತಿ ಮಾನದಂಡದ ಪ್ರಕಾರ ಔಷಧಿಗಳನ್ನು ಕೊಡಲಾಗಿದೆಯೆ;

ಇ) ಔಷಧ ಲಭ್ಯವಾಗದ ಇಲ್ಲವೇ ದುರುಪಯೋಗವಾದ ಬಗ್ಗೆ ಬಂದಿರುವ ಪ್ರಕರಣಗಳು ಎಷ್ಟು; ಇದರ ಮೇಲೆ ಏನು ಕ್ರಮಕೈಗೊಳ್ಳಲಾಗಿದೆ;

ಈ) ತಾಲ್ಲೂಕಿನಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಘಟಕ ಹಾಗೂ ಆಯುರ್ವೇದ ಆಸ್ಪತ್ರೆ ಒಂದೇ ಸ್ಥಳದಲ್ಲಿ ಕಾರ್ಯ ನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಅವುಗಳನ್ನು ಬೇರೆ ಸ್ಥಳಗಳಿಗೆ ವರ್ಗಾವಣೆ ಮಾಡಲು ಕೈಗೊಂಡಿರುವ ಕ್ರಮಗಳೇನು?

ಡಾ: ಎ.ಬಿ.ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಮೈಸೂರು ತಾಲ್ಲೂಕಿನಲ್ಲಿ ಒಟ್ಟು 13 ಪ್ರಾ.ಆ.ಕೇಂದ್ರಗಳು ಕಾರ್ಯನಿರ್ವಹಿಸುತ್ತಿದೆ. ಭಾರತ ಸರ್ಕಾರದ ಮಾರ್ಗಸೂಚಿಯ ಪ್ರಕಾರ ಬಯಲು ಸೀಮೆ ಪ್ರದೇಶದಲ್ಲಿ ಪ್ರತಿ 30000 ಜನ ಸಂಖ್ಯೆಗೆ ಹಾಗೂ ಗುಡ್ಡಗಾಡು ಮತ್ತು ಆದಿವಾಸಿ ಪ್ರದೇಶಗಳಲ್ಲಿ ಪ್ರತಿ 20000 ಜನಸಂಖ್ಯೆ ಒಂದು ಪ್ರಾ.ಆ.ಕೇಂದ್ರವನ್ನು ಮಂಜೂರು ಮಾಡಲಾಗುತ್ತಿದೆ. ಹಾಗೂ ಸರ್ಕಾರದ ನಿಬಂಧನೆಯ ಪ್ರಕಾರ ರೂ.1.00 ಲಕ್ಷ ಜನ ಜನಿತ ವಂತಿಕೆ, 2 ಎಕರೆ ಜಮೀನು ಬಾಡಿಗೆ ರಹಿತ ಕಟ್ಟಡವನ್ನು ನೀಡುವ ಗ್ರಾಮಕ್ಕೆ ಆದ್ಯತೆ ನೀಡಲಾಗುತ್ತಿದೆ.

ಆ) ಪ್ರತಿಯೊಂದು ಆರೋಗ್ಯ ಕೇಂದ್ರಕ್ಕೆ 2000-01ನೇ ಸಾಲಿನಿಂದ 75 ಸಾವಿರ ರೂಪಾಯಿಯ ಔಷಧಿಯನ್ನು ಒದಗಿಸಲಾಗುತ್ತಿದೆ. ಹಾಗೂ ಪ್ರಧಾನಮಂತ್ರಿ ಗ್ರಾಮೋದಯ ಯೋಜನೆಯಡಿಯಲ್ಲಿ 2000-01ನೇ ಸಾಲಿನಲ್ಲಿ ಪ್ರತಿಯೊಂದು ಪ್ರಾ.ಆ.ಕೇಂದ್ರಕ್ಕೆ ರೂ.10000 ರಷ್ಟು ಔಷಧಿಯನ್ನು ಸರಬರಾಜು ಮಾಡಲಾಗಿದೆ.

ಇ) ಮೈಸೂರು ಜಿಲ್ಲೆಯಲ್ಲಿ ಯಾವ ಪ್ರಕರಣವೂ ವರದಿಯಾಗಿಲ್ಲ.

ಈ) ಬಂದಿದೆ. ಭಾರತ ಸರ್ಕಾರದ ಇತ್ತೀಚಿನ ನೀತಿಯ ಪ್ರಕಾರ ವಿವಿಧ ರೀತಿಯ ವೈದ್ಯ ಪದ್ಧತಿಗಳನ್ನು ಒಂದೇ ಆವರಣದಿಂದ ನೀಡುವುದರಿಂದ ಜನತೆಗೆ ತೃಪ್ತಿ ತರುವ ಸೇವೆಗಳನ್ನು ನೀಡಿದಂತಾಗುವುದು. ಆದುದರಿಂದ ಅವನ್ನು ಸ್ಥಳಾಂತರಿಸುವ ಅವಶ್ಯಕತೆ ಕಂಡು ಬರುವುದಿಲ್ಲ.